ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ಹ.ಬ/ವಿವಾದ:194:2014-15 ದಿ: 20-05-2016

ಉಪಸ್ಥಿತರು: ಬಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1). ಈರಮ್ಮ ಗಂಡ: ವೇಮನ್ನ
ಸಂತೆ ಕೂಡ್ಲೂರು ಗ್ರಾಮ,ಆದೋನಿ ತಾ:
2) ನರಸಮ್ಮ ಗಂಡ: ಯಂಕಪ್ಪ
ಬೂದುಗುಪ್ಪ ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಂಕ್ರಪ್ಪ ತಂದೆ: ಯಂಕಪ್ಪ ಲೇಟ್
ಗಾಂಧಿಗ್ರಾಮ ಮೈಲಾಪುರ
ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ: | ಪಹಿಣಾಡು ಸಂಖ್ಯೆ: |
|---|---|---|---|---|
| ಬೂದುಗುಪ್ಪ ಗ್ರಾಮ | 39/B3 | 1-00 | H 24/2013-14 | 115/13-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಬೂದುಗುಪ್ಪ ಗ್ರಾಮದ** ಸ.ನಂ. **39/B3** ವಿಸ್ತೀರ್ಣ **1-00 ಎಕರೆ** ಜಮೀನಿಗೆ ಸಂಬಂಧಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿ **ಪತ್ರ ನಂ: 6286/12-13** ದಿ: **1-1-2013** ರಂದು **ಈರಮ್ಮ ಗಂಡ: ವೇಮನ್ನ ಇವರ ಹೆಸರಿನಲ್ಲಿ ದಾನಪತ್ರ ನೊಂದಣಿ ಹೊಂದಿದ್ದು** ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಲೇಟ್ ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ ಗಾಂದಿಗ್ರಾಮ ಮೈಲಾಪುರ** ಇವರು ದಿ: **8-10-2013** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನುದಿ: **21-8-2015, 18-9-2015, 16-11-2016, 8-2-2016, 11-3-2016, 26-3-2016, 1-4-2016, 7-5-2016** ಮತ್ತು **20-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ಈರಮ್ಮ ಗಂಡ: ವೇಮನ್ನ ಸಂತೆಕೂಡ್ಲೂರು ಗ್ರಾಮ ಇವರು ಬೂದುಗುಪ್ಪ ಗ್ರಾಮದ ಸ.ನಂ. 39/B3 ವಿಸ್ತೀರ್ಣ 1-00 ಎಕರೆ ಜಮೀನು ನರಸಮ್ಮ ಗಂಡ: ಯಂಕಪ್ಪ ಇವರಿಂದ ಸಬ್‌ರಿಜಿಸ್ಟರ್ ಕಛೇರಿ ಪತ್ರ ನಂ: 6286/12-13 ದಿ:1-1-2013 ರಂದು ದಾನಪತ್ರ ಪ್ರಕಾರ ನೋಂದಣಿ ಮಾಡಿಕೊಂಡಿರುತ್ತದೆ. ಶಂಕ್ರಪ್ಪ ತಂದೆ: ಲೇಟ್ ಯಂಕಪ್ಪ ಇವರು ದಿ: 8-10-2013 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ .ದಿನಾಂಕ: 14-7-2014 ರಂದು ಮೃತಪಟ್ಟಿದ್ದು ಅವರ ಪತ್ನಿಯಾದ ಸಾವಿತ್ರಮ್ಮ ಇವರು ನ್ಯಾಯಾಲಯದಲ್ಲಿ ಹಾಜರಾಗಿರುವುದಿಲ್ಲ ಸದರಿ ಆಸ್ತಿ ನರಸಮ್ಮ ಇವರಿಗೆ ತವರು ಮನೆಯಿಂದ ಬಂದಿದ್ದು ಸದರಿ ಆಸ್ತಿ ದಾನಪತ್ರ ಮೂಲಕ ನೋಂದಣಿಮಾಡಿಕೊಟ್ಟಿರುವುದು ಸರಿಯಾಗಿರುತ್ತದೆ ಎಂದು ದಾನಪತ್ರ ನೋಂದಣಿ ಪ್ರಕಾರ ಈರಮ್ಮ ಗಂಡ: ವೇಮನ್ನ ಎಂಬ ನನ್ನ ಹೆಸರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಸಾವಿತ್ರಮ್ಮ ಗಂಡ: ಲೇಟ್ ಶಂಕ್ರಪ್ಪ ಮೈಲಾಪುರ ಇವರ ಗಂಡ ದಿ: 8-10-2013 ರಂದು ಠಂಡು ತಕರಾರು ಅರ್ಜಿ ಸಲ್ಲಿಸಿ, ದಿ: 14-7-2014 ರಂದು ಮೃತಪಟ್ಟಿರುತ್ತಾರೆ. ಗಂಡನ ಬದಲಿಗೆ ಸಾವಿತ್ರಮ್ಮ ಇವರಿಗೆ ದಿ: 1-2-2016, 4-3-2016, 26-3-2016, 11-4-2016, 20-5-2016 ರಂದು ವಿಚಾರಣೆಗೆ ಹಾಜರಾಲು ನೋಟೀಸು ನೀಡಿದಾಗ್ಯೂ ಯಾವುದೇ ದಿನಾಂಕದಂದು ವಿಚಾರಣೆಗೆ ಹಾಜರಾಗಿರುವುದಿಲ್ಲ. ಹಾಗೂ ಯಾವುದೇ ಲಿಖಿತ ಹೇಳಿಕೆಗಳನ್ನು ಇಲ್ಲಿಯವರಿಗೂ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಬೂದುಗುಪ್ಪ ಗ್ರಾಮದ ಸ.ನಂ.39/B3 ವಿಸ್ತೀರ್ಣ 1-00 ಎಕರೆ ಜಮೀನು ದಾನ ಪತ್ರ ಪ್ರಕಾರ ಈರಮ್ಮ ಗಂಡ: ವೇಮನ್ನ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 20 -05-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ..

ಉಪ ತಹಶೀಲ್ದಾರರು,
ಸಿರುಗುಪ್ಪ ತಾಲೂಕು

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ.